ದಿನಾಂಕ:22-02-2006 ರಂದು ಮಧ್ಯಹ್ನ 3-00 ಗಂಟೆಗೆ ಶ್ರೀ. ಸಿ.ವಿ ಧರ್ಮರಾಜು ಅಧ್ಯಕ್ಷರು ನಗರಸಭೆ ಚಿಕ್ಕಮಗಳುರು ರವರ ಅಧ್ಯಕ್ಷತೆಯಲ್ಲಿ ನೆಡೆದ ವಿಶೇಷ ಸಭೆಯ ನಡುವಳಿಗಳು.

| | |
|---|---|
| ಹಾಜರಿ | : 22 |
| ಗೈರೂ ಹಾಜರಿ | : 11 |
| ಒಟ್ಟು | : 33 |

**ವಿಷಯ:**

ನಗರಸಭಾ ಸದಸ್ಯರಾದ ಶ್ರೀಮತಿ ಹೆಚ್. ಬಿ. ಲಕ್ಷ್ಮಿ ಇವರು ದಿನಂಪ್ರತಿ ನಗರಸಭೆಯಲ್ಲಿ ಕಛೇರಿ ನಡೆಯುವ ಸಮಯದಲ್ಲಿ ಅಧ್ಯಕ್ಷರು , ಉಪಾಧ್ಯಕ್ಷರು ಸದಸ್ಯರು ಮತ್ತು ಅಧಿಕಾರಿ/ಸಿಬ್ಬಂಧಿವರ್ಗದವರಿಗೆ ಮತ್ತು ವಿವಿಧ ಪಕ್ಷದ ಮುಖಂಡರಿಗೂ ಸಾರ್ವಜನಿಕರಿಗೂ ಅವಾಚ್ಯ ಶಬ್ಧಗಳಿಂದ ನಿಂದಿಸಿ ಮಾತನಾಡುತ್ತಿರುವ ಬಗ್ಗೆ ಮತ್ತು ಕರ್ತವ್ಯಕ್ಕೆ ಅಡಚಣೆ ಮಾಡಿ ಇಲ್ಲಸಲ್ಲದ ಸುಳ್ಳು ಆರೋಪಗಳನ್ನು ಹೊರಿಸಿ ಅತಿರೇಕವಾಗಿ ವರ್ತಿಸುತ್ತಿರುವುದರಿಂದ ಈ ಬಗ್ಗೆ ಸದರಿ ಸದಸ್ಯರ ವಿರುದ್ಧ ಕ್ರಮ ಕೈಗೊಳ್ಳುವ ಬಗ್ಗೆ ಚರ್ಚಿಸುವ ವಿಚಾರ.

**ತೀರ್ಮಾನ:**

ಈ ವಿಷಯವನ್ನು ಸಭೆಯಲ್ಲಿ ದೀರ್ಘವಾಗಿ ಚರ್ಚಿಸಲಾಯಿತು. ನಗರಸಭಾ ಸದಸ್ಯರಾದ ಶ್ರೀಮತಿ ಹೆಚ್. ಬಿ. ಲಕ್ಷ್ಮಿ ಇವರು ನಗರಸಭಾ ಕಛೇರಿ ನಡೆಯುವ ಸಮಯದಲ್ಲಿ ಅಧ್ಯಕ್ಷರು , ಉಪಾಧ್ಯಕ್ಷರು ಸದಸ್ಯರು ಮತ್ತು ಅಧಿಕಾರಿ/ಸಿಬ್ಬಂಧಿವರ್ಗದವರಿಗೆ ಮತ್ತು ವಿವಿಧ ಪಕ್ಷದ ಮುಖಂಡರಿಗೂ ಸಾರ್ವಜನಿಕರಿಗೂ ಅವಾಚ್ಯ ಶಬ್ಧಗಳಿಂದ ನಿಂದಿಸಿ ಮಾತನಾಡುತ್ತಿರುವ ಬಗ್ಗೆ ಮತ್ತು ಕರ್ತವ್ಯಕ್ಕೆ ಅಡಚಣೆ ಮಾಡಿ ಇಲ್ಲಸಲ್ಲದ ಸುಳ್ಳು ಆರೋಪಗಳನ್ನು ಹೊರಿಸಿ ಅತಿರೇಕವಾಗಿ ವರ್ತಿಸುತ್ತಿರುವುದರಿಂದ ಈ ಬಗ್ಗೆ ಸದರಿ ಸದಸ್ಯರ ವಿರುದ್ಧ ಕ್ರಮ ಕೈಗೊಳ್ಳುವ ಬಗ್ಗೆ ಪ್ರಸ್ತಾಪ ಬಂದಾಗ ಸಭೆಯಲ್ಲಿ ಯಾವ ಕಾರಣಕ್ಕಾಗಿ ಈ ಸದಸ್ಯರು ಈ ರೀತಿ ವರ್ತಿಸಿದರು ಮತ್ತು ಘಟನೇಗಳೇನಾದರೂ ಆಗಿದ್ದರೆ ವಿವರಣೆ ಮಾಡಲು ಕೋರಲಾಗಿ ಸದಸ್ಯರಾದ ಶ್ರೀ ಜೆರ್ಮಿಲೋಬೋ ರವರು, ನಾಗರಾಜ್ ರವರು, ಶ್ರೀ ಜೆ.ಬಿ. ಮಹೇಶ ರವರು ಶ್ರೀಮತಿ ಕಮಲಾಕ್ಷಿ ರವರು, ಶ್ರೀಮತಿ ಶಾರದಾ ಓಂಕಾರೇಶ್ ರವರು, ಶಶಿಕಲಾ ರವರು ಹಾಗೂ ಬಿ.ಆರ್. ದಿನೇಶ್ ರವರು ವಿವರಣೆ ನೀಡುತ್ತಾ, ಸಭೆಗೆ ನೀಡಲಾದ ಮಾಹಿತಿಯನ್ನು ಆಧರಿಸಿ ಉದಾಹರಣೆಗಾಗಿ ನಗರಸಭೆಯಲ್ಲಿ ಎನ್.ಎಂ.ಆರ್. ನಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ( ಮೂಲತಃ ಗಾರ್ಡನ್ ಕೆಲಸಗಾರರು) ಒಬ್ಬ ನೌಕರಳನ್ನು ತಾತ್ಕಾಲಿಕವಾಗಿ ನಗರಸಭೆಯ ಆಸ್ಪತ್ರೆಯಲ್ಲಿ ಕೆಲಸ ನಿರ್ವಹಿಸಲು ಮೌಖಿಕವಾಗಿ ಸೂಚಿಸಿದ್ದು, ಸದರಿ ನೌಕರಳು ಆಸ್ಪತ್ರೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾಗ ದಿನಾಂಕ : 13-02-2006 ರ ವೈದ್ಯರ ಲಿಖಿತ ಹೇಳಿಕೆಯಂತೆ ಸದರಿ ನೌಕರಳು ವಿನಾಕಾರಣ ವೈದ್ಯರು ಸೂಚಿಸುವ ಕೆಲಸವನ್ನು ಸರಿಯಾಗಿ ಮಾಡದೇ ಸುಮ್ಮ ಸುಮ್ಮನೇ ಬಾಯಿಗೆ ಬಂದಂತೆ ಮಾತನಾಡುವ ಹವ್ಯಾಸವನ್ನು ಇಟ್ಟು ಕೊಂಡಿದ್ದು ಈ ಬಗ್ಗೆ ವೈದ್ಯರು ಪ್ರಶ್ನಿಸಲಾಗಿ ಫ್ಯಾನ್‌ಗೆ ನೇಣುಹಾಕಿಕೊಳ್ಳಲು ಪ್ರಯತ್ನಿಸಿದ ಬಗ್ಗೆ ಕಛೇರಿಗೆ ವರದಿ ನೀಡಲಾಗಿದ್ದನ್ನು ಪರಿಶೀಲಿಸಿ, ಬೇರೆ ನೌಕರರನ್ನು ಸದರಿ ಆಸ್ಪತ್ರೆಗೆ ನಿಯೋಜಿಸಲು ನಗರಸಭೆಯಲ್ಲಿ ಕ್ರಮ ಕೈಗೊಳ್ಳುವಾಗ ಈ ವಿಚಾರವು ಹೇಗೋ ಸದಸ್ಯರಾದ ಶ್ರೀಮತಿ ಹೆಚ್.ಬಿ. ಲಕ್ಷ್ಮಿ ಇವರಿಗೆ ತಿಳಿದು ಕಛೇರಿಯಲ್ಲಿ ಯಾರನ್ನೂ ಈ ಬಗ್ಗೆ ವಿವರಣೆಯನ್ನು ಕೇಳದೇ ಏಕಾ ಏಕಿ ಕಛೇರಿಯಲ್ಲಿ ಮನ ಬಂದಂತೆ ಅಧ್ಯಕ್ಷರಿಗೆ, ಅಧಿಕಾರಿಗಳಿಗೂ, ಇತರೆ ನೌಕರರಿಗೂ ಅವಾಚ್ಯ ಶಬ್ಧಗಳಿಂದ ಕಿವಿಗೂ ಕೇಳಲು ಅಸಹ್ಯ ಪಡುವ ಕಟು ಮಾತಿನಿಂದ ನಿಂದಿಸುತ್ತಿರುವಾಗ ಈ ಬಗ್ಗೆ ಸದಸ್ಯರಾದ ಶ್ರೀ ಎಲ್.ವಿ. ಬಸವರಾಜು ರವರು ಶ್ರೀ ಹೆಚ್.ಡಿ. ತಮ್ಮಯ್ಯ ರವರು, ಇತರೆ ಸದಸ್ಯರು ಸಮಾಧಾನ ಮಾಡಲು ಪ್ರಯತ್ನಿಸಿದರೂ ಮಾತು ಕೇಳದಿದ್ದಾಗ ಈ ಬಗ್ಗೆ ಸಾರ್ವಜನಿಕರೆದುರೇ ಈ ರೀತಿ ವರ್ತಿಸಿರುವುದನ್ನು ನಗರಸಭಾ ಸದಸ್ಯರುಗಳು ಮಾನ್ಯ ಅಧ್ಯಕ್ಷರಿಗೆ ಲಿಖಿತವಾಗಿ ಈ ಬಗ್ಗೆ ವಿಶೇಷ ಸಭೆಯನ್ನು ಕರೆದು ನಗರಸಭಾ ಸದಸ್ಯರಾದ

PDF Created with deskPDF PDF Writer - Trial :: http://www.docudesk.com

ಶ್ರೀಮತಿ ಹೆಚ್.ಬಿ. ಲಕ್ಷ್ಮಿ ಇವರ ಮೇಲೆ ಕ್ರಮ ಕೈಗೊಳ್ಳಲು ಒತ್ತಾಯಿಸಿದಾಗ ಈ ಬಗ್ಗೆ ದಿನಾಂಕ ನಿಗಧಿಪಡಿಸಿ ವಿಶೇಷ ಸಭೆಯನ್ನು ಕರೆಯಲಾಗಿರುತ್ತೆ ಎಂಬ ವಿಚಾರವನ್ನು ಸಭೆಗೆ ತಿಳಿಸಲಾಯಿತು.

ಈ ಎಲ್ಲಾ ಅಂಶಗಳನ್ನು ಪರಿಗಣಿಸಿ, ನಗರಸಭೆ ಸದಸ್ಯರು ಕಛೇರಿಗೂ ಹಾಗೂ ಸ್ಥಾನಮಾನಕ್ಕೂ ಬೆಲೆ ಕೊಡದೇ ಅಗೌರವದಿಂದ ವರ್ತಿಸಿರುವುದನ್ನು ಖಂಡಿಸಿ ಮುಂದೆ ಈ ಘಟನೆಗಳು ಮರುಕಳಿಸದೇ ಒಂದು ಮಾದರಿಯಾಗಬೇಕೆಂದು ಸದಸ್ಯರಾದ ಶ್ರೀಮತಿ ಹೆಚ್.ಬಿ. ಲಕ್ಷ್ಮಿ ಇವರಿಗೆ ಪುರಸಭಾ ಅಧಿನಿಯಮ 1964 ಸೆಕ್ಷನ್ 41 ರಂತೆ ಸದಸ್ಯನು ತನ್ನ ಕರ್ತವ್ಯಗಳ ನಿರ್ವಹಣೆಯಲ್ಲಿ ದುರ್ವರ್ತನೆಯ ಅಥವಾ ಯಾವುದೇ ಅಪಮಾನಕರ ವರ್ತನೆಯ ಬಗ್ಗೆ ತಪ್ಪಿತಸ್ಥನಾಗಿದ್ದಲ್ಲಿ ಅಥವಾ ಕೌನ್ಸಿಲರನಾಗಿ ತನ್ನ ಕರ್ತವ್ಯಗಳನ್ನು ನೆರವೇರಿಸುಲು ಅಸಮರ್ಥನಾಗಿದ್ದರೆ ಮುನಿಸಿಪಲ್ ಕೌನ್ಸಿಲ್‌ನ ಶಿಫಾರಸ್‌ನ ಮೇರೆಗೆ ಮಾನ್ಯ ಜಿಲ್ಲಾಧಿಕಾರಿಗಳಿಗೆ ಸದಸ್ಯತ್ವದಿಂದ ತೆಗೆದು ಹಾಕಲು ಶಿಫಾರಸ್ ಮಾಡಬಹುದೆಂದು ಸಭೆಯು ಸರ್ವಾನುಮತದಿಂದ ತೀರ್ಮಾನಿಸಲಾಯಿತು.

**ಸಹಿ/-**
**ಅಧ್ಯಕ್ಷರು**
**ನಗರಸಭೆ,ಚಿಕ್ಕಮಗಳೂರು.**

**ಯಥಾ ನಕಲು**

**ಪೌರ ಆಯುಕ್ತರು,**
**ನಗರಸಭೆ, ಚಿಕ್ಕಮಗಳೂರು.**

PDF Created with deskPDF PDF Writer - Trial :: http://www.docudesk.com

PDF Created with deskPDF PDF Writer - Trial :: http://www.docudesk.com